hand over ಮಾಡುತ್ತೀರೋ ಆ ತಕ್ಷಣ ಇವರಿಗೆ ಹಣವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು

ಶ್ರೀ ಜಿ ಟಿ ದೇವೇಗೌಡ ಸಕ್ಕರೆ ಕಾರ್ಖಾನೆಗಳಿಗೆ ಟೆಂಡರ್ ಹಾಕತಕ್ಕವರು ಬಹಳ ಕಡಿಮೆಯಾಗಿದೆ ಕೇವಲ ಒಬ್ಬೊಬ್ಬರು ಟೆಂಡರ್ ಹಾಕುತ್ತಿದ್ದಾರೆ Single tenderಗಳು ಆಗುತ್ತಿದೆ ಯಾರು ಕೂಡ ಬರುತ್ತಿಲ್ಲ ಇಂತಹ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ನಾವು ಅವರನ್ನು ಕರೆದು ಇದನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳುತ್ತೇವೆ

ಆಳಂದ ಸಕ್ಕರೆ ಕಾರ್ಖಾನೆ

165(1088) ಶ್ರೀ ಪಾಟೀಲ್ ಬಿ ಆರ್ (ಆಳಂದ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ಸಕ್ಕರೆ ಕಾರ್ಖಾನೆ ಖಾಸಗಿಯವರಿಗೆ ಲೀಸ್ ಕೊಡುವಾಗ ಎಷ್ಟು ಜನ ಆಸಕ್ತಿ ವಹಿಸಿ ಅರ್ಜಿ ಹಾಕಿದ್ದರು,

ಆ) ಲೀಸ್ ಹೋಲ್ಡರ್‌ಗೆ ಯಾವ ಯಾವ ಷರತ್ತುಗಳನ್ನು ಹಾಕಲಾಗಿದೆ ಹಾಗೂ ಎಷ್ಟು ಹಣಕ್ಕೆ ಲೀಸ್ ಕೊಡಲಾಗಿದೆ (ವಿವರ ಒದಗಿಸುವುದು)?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಆಳಂದ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆಗೆ ಕೊಡುವಾಗ ಒಬ್ಬರು ಮಾತ್ರ ಅಂದರೆ ಶ್ರೀ ರೇಣುಕಾ ಶುಗರ್ಸ್ ಬೆಳಗಾಂ ಇವರು ಟೆಂಡರ್ ಅರ್ಜಿ ಹಾಕಿದ್ದರು

ಆ) ಗುತ್ತಿಗೆದಾರರಿಗೆ ಈ ಕೆಳಕಂಡ ಪ್ರಮುಖ ಷರತ್ತುಗಳನ್ನು ವಿಧಿಸಲಾಗಿದೆ

1) ಗುತ್ತಿಗೆ ಅವಧಿಯು 2005–06 ರಿಂದ 2011–12ರವರೆಗೆ 7 ವರ್ಷಗಳಿಗೆ ಸೀಮಿತವಾಗಿದೆ

2) ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಕಾರ್ಖಾನೆಯ ಕಾರ್ಯ ವ್ಯಾಪ್ತಿಯಲ್ಲಿ ಲಭ್ಯವಿರುವ ಕಬ್ಬನ್ನು ನುರಿಸಬೇಕು

3) ಕೇಂದ್ರ ಸರ್ಕಾರ ನಿಗದಿಪಡಿಸಿರುವಂತೆ ಶಾಸನಬದ್ಧ ಕನಿಷ್ಟ ದರಕ್ಕಿಂತ ಕಡಿಮೆ ಇಲ್ಲದಂತೆ ಕಬ್ಬಿನ ದರ ಪಾವತಿಸುವುದು

4) ಹಾಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನೌಕರ ಹಾಗೂ ಕಾರ್ಮಿಕರನ್ನು ಸಾಧ್ಯವಾದ ಮಟ್ಟಿಗೆ ಕೆಲಸದ ಮೇಲೆ ತೆಗೆದುಕೊಳ್ಳುವುದು ಮತ್ತು

ಗುತ್ತಿಗೆ ಅವಧಿಯಲ್ಲಿ ಇವರ ಸಂಬಳ ಹಾಗೂ ಇನ್ನಿತರೆ ಭತ್ಯೆಗಳನ್ನು ಗುತ್ತಿಗೆದಾರರೇ ಪಾವತಿಸುವುದು

5) ಕಾರ್ಖಾನೆಯನ್ನು ಗುತ್ತಿಗೆ ಅವಧಿ ಮುಗಿದ ನಂತರ ಸುಸ್ಥಿತಿಯಲ್ಲಿ ಹಸ್ತಾಂತರಿಸುವುದು

6) ಗುತ್ತಿಗೆ ಅವಧಿಯಲ್ಲಿ ಸರ್ಕಾರಕ್ಕೆ ಹಾಗೂ ಇತರೇ ಸಂಸ್ಥೆಗಳಿಗೆ ಪಾವತಿಸಬೇಕಾದ ಎಲ್ಲಾ ಬಗೆಯ ತೆರಿಗೆ, ಫೀ ಇತ್ಯಾದಿಗಳನ್ನು ಗುತ್ತಿಗೆದಾರರೇ ಪಾವತಿಸಬೇಕು

7) ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಅಂದರೆ 2005–2011ರ ಅವಧಿಯಲ್ಲಿ ರೂ 8 00 ಕೋಟಿ ಗುತ್ತಿಗೆ ಹಣವನ್ನು ಮತ್ತು ನೌಕರರ ಸ್ವಯಂ ನಿವೃತ್ತಿ ಯೋಜನೆಗೆ ರೂ 3 00 ಕೋಟಿ ಪಾವತಿಸಬೇಕು

ಕಾರ್ಖಾನೆಯನ್ನು ಮೆ ರೇಣುಕಾ ಶುಗರ್ಸ್ ಲಿ, ರವರಿಗೆ ರೂ 8 00 ಕೋಟಿ ಗುತ್ತಿಗೆಗೆ ಮತ್ತು ರೂ 3 00 ಕೋಟಿ ನೌಕರರ ಸ್ವಯಂ ನಿವೃತ್ತಿ ಯೋಜನೆಗೆ ನೀಡಲಾಗಿದೆ

ಶ್ರೀ ಬಿ ಆರ್ ಪಾಟೀಲ್ ಸಕ್ಕರೆ ಕಾರ್ಖಾನೆಯ ಬಗ್ಗೆ ನಿನ್ನೆ ಜಿಲ್ಲಾ ಸಚಿವರು, ರೇವೂನಾಯಕ್‌ರವರು, ನಾನೂ, ಎಂ ವೈ ಪಾಟೀಲ್‌ರವರು ಒಂದು ಸಭೆಯನ್ನು ಮಾಡಿದ್ದೇವೆ ನಾನು ಮಾನ್ಯ ಸಚಿವರಿಗೆ agreement copyಯನ್ನು ಕೇಳಿ ಪತ್ರವನ್ನು ಬರೆದಿದ್ದೆ ಅದನ್ನು ಉತ್ತರದಲ್ಲಿ attach ಮಾಡಿಲ್ಲ ಕಾರ್ಖಾನೆಯನ್ನು ಪ್ರಾರಂಭ ಮಾಡುವಾಗ ರೇಣುಕಾ sugarsನವರು ಲೀಸ್ ತೆಗೆದುಕೊಂಡರು ಮತ್ತು ಆಗ ಟನ್ನಿಗೆ ಒಂದು ಸಾವಿರ ರೂಪಾಯಿ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದರು ನಮ್ಮ ಬೇಡಿಕೆ 1250 ರೂಪಾಯಿ ಇತ್ತು ಈಗ ಒಮ್ಮೆಗೇ 800 ರೂಪಾಯಿಗಳಿಗೆ ಕೊಡುವುದಿದ್ದರೆ ಕೊಡಿ ಎಂದು ಹೇಳಿದ ಮೇಲೆ ಆಮರಣಾಂತರ ಉಪವಾಸ ಸತ್ಯಾಗ್ರಹ ಅಫಜಲ್ಪುರದಲ್ಲಿ ನಡೆಯಿತು ಕೊನೆಗೆ ಜಿಲ್ಲಾ ಸಚಿವರು, ಎಂ ವೈ ಪಾಟೀಲರು, ನಾನೂ, ಮಂತ್ರಿಗಳಾದ ರೇವೂನಾಯಕ್‌ರವರು ಸಭೆ ಸೇರಿದೆವು, ಡಿ ಸಿ ಯವರಿದ್ದರು, ಎಸ್ ಪಿ ಯುವರು ಇದ್ದರು ಕಾರ್ಖಾನೆಯವರು ಯಾವುದಕ್ಕೂ ಕೆಳಕ್ಕೆ ಬರುತ್ತಿಲ್ಲ ಕೇಂದ್ರ ಸರ್ಕಾರದವರು 9ರಷ್ಟು ರಿಕವರಿ ಇದ್ದರೆ ಟನ್ನಿಗೆ 802 ರೂಪಾಯಿ 50 ಪೈಸೆ ದರವನ್ನು ಕೊಡಬೇಕೆಂದು ದರವನ್ನು ನಿಗದಿ ಮಾಡಿದ್ದಾರೆ ಆದರೆ ಅದು ಇಲ್ಲಿ ಉಲ್ಲಂಘನೆಯಾಗುತ್ತಿದೆ

ಒಂದು ಸಾವಿರ ಕೊಡುವುದರ ಬದಲಾಗಿ ಈಗ 800 ರೂಪಾಯಿ ಕೊಡಲು ಹೋಗಿದ್ದಾರೆ ನಮ್ಮಲ್ಲಿ ರಿಕವರಿ 10 5 ಇದೆ ಹೀಗಾಗಿ ಸಕ್ಕರೆ ಕಾರ್ಖಾನೆಗಳು ರೈತರನ್ನು ಶೋಷಣೆ ಮಾಡಲು ಹೊರಟಿವೆ ಪ್ರಾರಂಭದಲ್ಲಿ ನಮ್ಮ ಕಬ್ಬನ್ನು ಬಿಟ್ಟು ಮಹಾರಾಷ್ಟ್ರದಿಂದ ತಂದರು ಈಗ ಏಪ್ರಿಲ್‌ವರೆಗೆ ಒಂದು ಲಕ್ಷ ಟನ್ ಕಬ್ಬನ್ನು ಅರೆದರೂ ಇನ್ನೂ ಕಬ್ಬು ಉಳಿಯುತ್ತದೆ ಇದರ ಬಗ್ಗೆ ಸರ್ಕಾರ ಏನು ಯೋಚನೆ ಮಾಡುತ್ತದೆ ಹೇಳಬೇಕು ಅವರು ಟನ್ನಿಗೆ 800 ರೂಪಾಯಿ ಕೊಡುತ್ತಿದ್ದಾರೆ ಇದರಿಂದ ಕೇಂದ್ರ ಸರ್ಕಾರದ ನೀತಿ ವಯಲೇಷನ್ ಆಗಿದೆ ಇದಕ್ಕೆ ಅವರ ಮೇಲೇನು ಕ್ರಮ ಕೈಗೊಳ್ಳುತ್ತೀರಿ? ಅವರನ್ನು ಪ್ರಾಸಿಕ್ಯೂಟ್ ಮಾಡುತ್ತೀರೋ, ಕೇಸ್ ಹಾಕುತ್ತೀರೋ ಏನು ಮಾಡುತ್ತೀರೋ ಹೇಳಿ

ಶ್ರೀ ಜಿ ಟಿ ದೇವೇಗೌಡ ನಮ್ಮ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ ಅದರ ಬಗ್ಗೆ ನಮ್ಮ ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಕಬ್ಬು ಬೆಳೆಗಾರರು ಮತ್ತು ಮಾಲೀಕರನ್ನು ಕರೆದು ಸಭೆಯನ್ನೂ ಕೂಡ ನಡೆಸಿದ್ದೇವೆ ಆದರೆ, ಅಲ್ಲಿ ಇರತಕ್ಕದ್ದು 1250 ಟನ್ ಕಬ್ಬನ್ನು ಅರೆಯತಕ್ಕ ಹಳೆಯ ಯಂತ್ರ ಅದನ್ನು ಕೂಡ ನಾವು ಕೊಡಬೇಕು ಎಂಬ ಸಂದರ್ಭದಲ್ಲಿ ರೇಣುಕ sugarsನವರು ಮಾತ್ರ ಅದಕ್ಕೆ ಬಿಡ್ಡುದಾರರಾಗಿ ಪಾಲುಗೊಂಡಿದ್ದಾರೆ ಏನಾದರೂ ಮಾಡಿ ಅದನ್ನು ಅವರಿಗೆ ಕೊಟ್ಟು ಮುಂದುವರೆಸಿದರೆ ಮಾತ್ರ ಈ ಕಾರ್ಖಾನೆ ಉಳಿಯುತ್ತದೆ ಇಲ್ಲದಿದ್ದರೆ ಈ ಕಾರ್ಖಾನೆ ಉಳಿಯುವುದಿಲ್ಲ ಅಲ್ಲಿಯ ನೌಕರರಿಗೆ ಸಂಬಳವನ್ನು ಕೊಡಲು ಆಗುವುದಿಲ್ಲ ಎಂಬ ದೃಷ್ಟಿಯಿಂದ ತೀರ್ಮಾನವನ್ನು ಮಾಡುತ್ತಿದ್ದೇವೆ ಬಿ ಆರ್ ಪಾಟೀಲರು ಮತ್ತು ಜಿಲ್ಲಾ ಸಚಿವರೇನು ಪ್ರಯತ್ನ ಮಾಡಿದ್ದಾರೆ, ಮತ್ತೊಮ್ಮೆ ಆ ಸಭೆಯನ್ನು ಕರೆದು ಸಾಧ್ಯವಾದಷ್ಟು ಬೇಗ ಅದಕ್ಕೆ ಪ್ರೋತ್ಸಾಹವನ್ನು ಕೊಡಲು ಪ್ರಯತ್ನ ಮಾಡುತ್ತೇವೆ

ಶ್ರೀ ಬಿ.ಆರ್. ಪಾಟೀಲ್: ನಿನ್ನೆ ಜಿಲ್ಲಾ ಸಚಿವರಾದ ರೇವುನಾಯಕ್‌ರವರು, ಎಂ ಪಿ ಪಾಟೀಲರು, ಮತ್ತು ನಾನು ಮೂರು ಗಂಟೆ ಸಭೆ ಮಾಡಿದ್ದೇವೆ ಇದು ವಯಲೇಷನ್ ಆಗುತ್ತದೆ, ದಯಮಾಡಿ ರೇಟನ್ನು ಜಾಸ್ತಿಕೊಡಿ ಎಂದರೆ, ಆಮದುರಣಾಂತರ ಉಪವಾಸ ಕುಳಿತರೂ ಅವರು ರೈತರನ್ನು ಹೋಗಿ ಭೇಟಿ ಮಾಡಲು ತಯಾರಿಲ್ಲ ಕೊನೆಗೆ ನಾವೇ ಅವರಲ್ಲಿ

ವಿನಂತಿ ಮಾಡಿಕೊಂಡು ಎಬ್ಬಿಸಿದ್ದೇವೆ ಈ ರೀತಿ ಖಾಸಗಿ ಕಾರ್ಖಾನೆಯವರು ಜನರ ಮೇಲೆ ಸವಾರಿ ಮಾಡಲು ಹೋಗುತ್ತಾರಲ್ಲ, ಅದಕ್ಕೆ ಸರ್ಕಾರದಿಂದ ನಿಯಂತ್ರಣ ಇಲ್ಲವೇ? ಅವರು ಏನು ಬೇಕಾದರೂ ಮಾಡಬಹುದೇ? ಮನಸ್ಸಿಗೆ ಬಂದದ್ದನ್ನು ಮಾಡಬಹುದೇ? ನಮ್ಮ ಕಡೆ ಮಜ್ಬೂರಿ ಖಾನ ಮಹಾತ್ಮಾ ಗಾಂಧಿ ಎಂದು ಒಂದು ಗಾದೆ ಮಾತನ್ನು ಹೇಳುತ್ತಾರೆ ಆ ರೀತಿ ಇವರು ನಮ್ಮ ಅನಿವಾರ್ಯತೆಯನ್ನು ದುರುಪಯೋಗ ಪಡಿಸಿಕೊಳ್ಳಬಾರದಲ್ಲಾ? ಸರ್ಕಾರದ ನಿಯಂತ್ರಣ ಇಲ್ಲವೆಂದಾಗುತ್ತದೆ ದಯಮಾಡಿ ರಿಕವರಿ 9 ಪರ್ಸೆಂಟ್ ಇದ್ದರೂ ಕೂಡ 805 ರೂಪಾಯಿ 50 ಪೈಸೆ ಕೊಡಬೇಕೆಂದು ಕೇಂದ್ರ ಸರ್ಕಾರದ ಸುತ್ತೋಲೆ ಏನಿದೆ ಅದು ವಯಲೇಷನ್ ಆಗಿದೆ ಆ ರೀತಿ ವಯಲೇಷನ್ ಆಗಿರುವುದನ್ನು ಸರಿಪಡಿಸಿ ನಮಗೆ ಒಂದು ಸಾವಿರ ರೂಪಾಯಿಗಳನ್ನು ಕೊಡಿಸಿಕೊಡಬೇಕು

ಶ್ರೀ ಜಿ ಟಿ ದೇವೇಗೌಡ ನಾವು ಏನು ಪ್ರಯತ್ನ ಮಾಡಿದರೂ, ಕಬ್ಬಿನ ಉತ್ಪತ್ತಿಕೂಡ ಆ ಭಾಗದಲ್ಲಿ ಕಡಿಮೆ ಇದೆ ಅದನ್ನು ನಡೆಸಲು ತೊಂದರೆ ಇದೆ ಎಂಬ ಕಾರಣದಿಂದ ಅವರು ಹಲವಾರು ಬಾರಿ ನಾವು ಕೊಡಲು ಆಗುವುದಿಲ್ಲವೆಂದು ಹೇಳುತ್ತಿದ್ದಾರೆ ಮತ್ತೊಮ್ಮೆ ಅವರು ಏನು ಹೇಳಿದ್ದಾರೆ ಅದರ ಬಗ್ಗೆ ಪ್ರಯತ್ನ ಮಾಡುತ್ತೇನೆ

ಶ್ರೀ ಬಿ ಆರ್ ಪಾಟೀಲ್ ನೀವು ಅಧಿಕಾರಿಗಳ ಮಾತನ್ನು ಕೇಳಿ ದಯಮಾಡಿ ಸದನದಲ್ಲಿ ಮಾತಿಗೆ ಸಿಕ್ಕಿಹಾಕಿಕೊಳ್ಳಬೇಡಿ ಅಲ್ಲಿ ಇವತ್ತು ಒಂದು ಲಕ್ಷ ಟನ್ ಕಬ್ಬು ಜಾಸ್ತಿ ಇದೆ

ಶ್ರೀ ಜೆ ಸಿ ಮಾದುಸ್ವಾಮಿ ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ಕೇಳಿದ್ದೆವು ಇದರ ಬಗ್ಗೆ ಒಟ್ಟಿಗೆ ಮಾತನಾಡುವುದರಲ್ಲಿ ಅರ್ಥವಿದೆ

ಅಧ್ಯಕ್ಷರು ಅದು ಆಳಂಕ ಸಕ್ಕರೆ ಕಾರ್ಖಾನೆಯದ್ದು

ಶ್ರೀ ಬಿ ಆರ್ ಪಾಟೀಲ್ ಕಬ್ಬು ಕಡಿಮೆ ಇದೆಯೆಂದು ನಿಮ್ಮ ಬಾಯಿಯಿಂದ ಹೇಳಿಸುತ್ತಾರೆ ಕಬ್ಬು ಕಡಿಮೆ ಇದ್ದರೆ ಕಾರ್ಖಾನೆಗೆ ಕಬ್ಬನ್ನು ಒಯ್ಯುತ್ತಲೇ ಇರಲಿಲ್ಲ

ಶ್ರೀ ಜಿ ಟಿ ದೇವೇಗೌಡ ಇದು 1250 ಟನ್ ಕಬ್ಬನ್ನು ಮಾತ್ರ ಅರೆಯುವ ಸಾಮರ್ಥ್ಯ ಹೊಂದಿರತಕ್ಕದ್ದು ನಮ್ಮ ಪಾಂಡವಪುರ ಸಕ್ಕರೆ

ಕಾರ್ಖಾನೆಯಲ್ಲಿ 3500 ಟನ್ ಅರೆಯುವ ಸಾಮರ್ಥ್ಯ ಇದೆ ಇವತ್ತು ಕೇಂದ್ರ ಸರ್ಕಾರ ಕೂಡ ಈ ಬಾರಿ ಕಬ್ಬಿನ ದರವನ್ನು ನಗದಿ ಮಾಡಿಲ್ಲ ಈ ಎಲ್ಲಾ ಕಾರಣಗಳಿಂದ ಮಾನ್ಯ ಸದಸ್ಯರನ್ನು ಅವರನ್ನೂ ಕರೆದು ಸಂಬಂಧಪಟ್ಟ ಜಿಲ್ಲಾ ಮಂತ್ರಿಯವರನ್ನೆಲ್ಲಾ ಕರೆದು, ಸಾಧ್ಯವಾದಮಟ್ಟಿಗೆ ರೈತರಿಗೆ ಹೆಚ್ಚು ಬೆಲೆಯನ್ನು ಕೊಡಬೇಕೆಂಬ ಮನವಿಯನ್ನು ನಾವೂ ಕೂಡ ಮಾಡುತ್ತೇವೆ

ಶ್ರೀ ಬಿ ಆರ್ ಪಾಟೀಲ್ ಕೇಂದ್ರ ಸರ್ಕಾರದ ನೀತಿಯ ವಯಲೇಷನ್ ಆಗುತ್ತಿದೆ

ಅಧ್ಯಕ್ಷರು ಮಾನ್ಯ ರಮೇಶ್ ಕುಮಾರ್‌ರವರ ಪ್ರಶ್ನೆಗೆ 15 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ

ಶ್ರೀ ಬಿ ಆರ್ ಪಾಟೀಲ್ ಇಲ್ಲಿ ವಯಲೇಷನ್ ಆಗುತ್ತಿದೆ

ಶ್ರೀ ಜಿ ಟಿ ದೇವೇಗೌಡ. ವಯಲೇಷನ್ ಆಗುತ್ತಿದ್ದರೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ

ಅಧ್ಯಕ್ಷರು: ಬಿ ಆರ್ ಪಾಟೀಲರೇ, ಇದು ಪ್ರಶ್ನೋತ್ತರ

ಶ್ರೀ ಜೆ ಸಿ ಮಾಧುಸ್ವಾಮಿ. 15 ದಿವಸ ಎಂದರೆ ತಾವು 15 ದಿವಸ assembly ನಡೆಸುತ್ತೀರಾ? ಇನ್ನು 3 ದಿವಸ ಮಾತ್ರ ಇದೆ

ಶ್ರೀ ಕೆ ಶ್ರೀನಿವಾಸಗೌಡ. 15 ದಿವಸ assembly ನಡುಸುತ್ತೀರಾ? 15 ದಿವಸ assembly ನಡೆದರೆ ನಮ್ಮ ಅಭ್ಯಂತರವಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ. Speaker ಆದ ತಾವು ನಮ್ಮ ರಕ್ಷಣೆಗೆ ಬರಬೇಕು ಅವರು 15 ದಿವಸ ಸಮಯ ಬೇಕು ಎಂದರೆ ತಾವು ನಮ್ಮ ರಕ್ಷಣೆಗೆ ಬರಬೇಕು

ಅಧ್ಯಕ್ಷರು ಹಾಗಲ್ಲಾ, ಏನಾಗಿದೆ ಎಂದರೆ ಅವರಿಗೆ ಜಾಸ್ತಿಯಾಯಿತು ಕುಳಿತುಕೊಳ್ಳಿ ಎಂದು ಹೇಳಿದ್ದೇನೆ

(ಗೊಂದಲ)

ಅವರು 15 ದಿವಸ ಕಾಲಾವಕಾಶ ಬೇಕು ಎಂದು ಹೇಳಿದ್ದಾರೆ, ಅದನ್ನು ನಾನು ಇಲ್ಲಿ ಹೇಳಬೇಕಲ್ಲಾ?

ಶ್ರೀ ಎನ್ ಧರ್ಮಸಿಂಗ್. ಇಲ್ಲಿ ಕಾಲಾವಕಾಶದ ಪ್ರಶ್ನೆ ಉದ್ಭವವಾಗುವುದಿಲ್ಲ ಮಾಧುಸ್ವಾಮಿಯವರು ಹೇಳಿದಂತೆ ಅವರು ಮೊನ್ನೆ ಕೂಡ ಈ ಪ್ರಶ್ನೆಯನ್ನು ಎತ್ತಿದ್ದರು ಕಬ್ಬು ಬೆಳೆಗಾರರ ಬಹಳ ಗಂಭೀರವಾದ

ಪ್ರಶ್ನೆ ಇದೆ ಮುಖ್ಯಮಂತ್ರಿಗಳು ಬೆಳಗಾಂಗೆ ಹೋಗಿ ಹೆಚ್ಚಿನ ಹಣವನ್ನು ಕೊಡುತ್ತೇವೆಂದು ಹೇಳಿದ್ದರು ನಿನ್ನೆಯ ಸಭೆಯಲ್ಲಿ ಬಿ ಆರ್ ಪಾಟೀಲರು, ದರ್ಶನಾಪುರ್‌ರವರೂ ಇದ್ದರು, ಸಂಬಂಧಪಟ್ಟ ಎಲ್ಲ ಶಾಸಕರೂ ಇದ್ದರು ರೇಣುಕಾ sugarsನ ಆ ಹೆಣ್ಣುಮಗಳು 800 ರೂಪಾಯಿಗಿಂತ ಹೆಚ್ಚು ಕೊಡಲು ಆಗುವುದಿಲ್ಲವೆಂದು ಹೇಳಿದ್ದಾರೆ ಕೊಡಬೇಕಾದರೆ ರಾಜ್ಯ ಸರ್ಕಾರ ತನ್ನ ಬೊಕ್ಕಸದಿಂದ ಕೊಡಲಿ ಎಂದು ಹೇಳಿದ್ದಾರೆ ಇವತ್ತು ಇದರ ಬಗ್ಗೆ ಪ್ರಸ್ತಾಪವಾದಾಗ ತಾವು ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ ಇವತ್ತು ಮುಖ್ಯಮಂತ್ರಿಯವರು ಸದನದಲ್ಲಿದ್ದಾರೆ ಆದ್ದರಿಂದ ಮುಖ್ಯಮಂತ್ರಿಯವರು ನಿಖರವಾದ ಉತ್ತರವನ್ನು ರಾಜ್ಯದ ಕಬ್ಬು ಬೆಳೆಗಾರರಿಗೆ, ರೈತರಿಗೆ ಕೊಡಬೇಕು At list ಕಬ್ಬು ಬೆಳೆಗಾರರ ಬಗ್ಗೆ ಸರ್ಕಾರ ಏನು ಚಿಂತನೆ ಮಾಡುತ್ತಿದೆ ಎಂಬ ಬಗ್ಗೆ ಈ ಮಹತ್ವವಾದ ಚರ್ಚೆಯಲ್ಲಿ ಹೇಳಿಬಿಟ್ಟರೆ ಸಾಕು

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು) ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ವಿಚಾರವಾಗಿ ಸದನದಲ್ಲೇನು ಪ್ರಸ್ತಾಪ ಮಾಡಿದ್ದಾರೆ, rateನ್ನು ನಿಗದಿ ಮಾಡತಕ್ಕದ್ದು ಸರ್ಕಾರದ ವ್ಯಾಪ್ತಿಯಲ್ಲಿ ಇಲ್ಲ ನಾವು ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೆ ಮನವಿ ಮಾಡಬಹುದಷ್ಟೇ ಕಬ್ಬು ಬೆಳೆಯುವ ವಿಚಾರದಲ್ಲಿ ಕೇಂದ್ರ ಸರ್ಕಾರದ ನೀತಿಯೇನಿದೆ, ಆ ಬಗ್ಗೆ ನಾವು ಈಗಾಗಲೇ ಹಲವಾರು ಸಭೆಗಳನ್ನು ಮಾಡಿದ್ದೇವೆ ರೈತರುಗಳ ಮತ್ತು ಸಕ್ಕರೆ ಮಾಲೀಕರ ಸಭೆಯನ್ನು ಮಾಡಿದ್ದೇವೆ ಆದರೆ, ಈಗಾಗಲೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಕ್ಕರೆಯ ಬೆಲೆ ಇಳಿತವಾಗುತ್ತಿರುವ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಯ ಮಾಲೀಕರು ಅವರದ್ದೇ ಆದಂಥ ತೊಂದರೆಗಳನ್ನು ಸರ್ಕಾರದ ಮುಂದೆ ತಂದಿದ್ದಾರೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಈಗ ಸರ್ಕಾರವೇನು purchase tax ಹಾಕುತ್ತಿದೆ ಅದನ್ನೇನಾದರೂ ಕಡಿಮೆ ಮಾಡಿ ಆ ಹಣವನ್ನು ರೈತರಿಗೆ ಕೊಡಿಸುವ ಏನಾದರೂ ವ್ಯವಸ್ಥೆ ಮಾಡಲು ಒಂದು ಚಿಂತನೆ ಮಾಡಿದ್ದೇವೆ

ಅಧ್ಯಕ್ಷರು ರಮೇಶ್‌ಕುಮಾರ್‌ರ ಪ್ರಶ್ನೆಗೆ 15 ದಿನಗಳ ಕಾಲಾವಕಾಶ ಕೇಳಿದ್ದಾರೆ

ಶ್ರೀ ಕೆ ಆರ್ ರಮೇಶ್‌ಕುಮಾರ್. ಅದು ಬಹಳ ಸರಳವಾದ ಪ್ರಶ್ನೆ ಅವರು ಯಾಕೆ ಹಾಗೆ ಸಮಯ ಕೇಳಿದ್ದಾರೋ ಗೊತ್ತಿಲ್ಲ ನಾನು

Pg 1

ಕೇಳಿರುವುದಾದರೂ ಏನೆಂದರೆ ಕರ್ನಾಟಕಕ್ಕೆ ಅಗತ್ಯವಿರುವ IFS ಎಷ್ಟು ಎಂದು DPAR ನಲ್ಲಿರುವ ಬ್ಯೂರೋಕ್ರಾಟ್ಸ್ ಬಹಳ ಜಾಣರು ಒಂದೋ unstarred ಮಾಡಿಬಿಡುತ್ತಾರೆ ಇಲ್ಲ ಈ ತರಹ ಮಾಡಿಬಿಡುತ್ತಾರೆ ನಾನು ಅಲ್ಲಿ ಕೂತಿದ್ದಾಗಲೂ ಈ ಅನುಭವ ಆಗಿದೆ ಅವರ ಯಾವ್ಯಾವ ಹಲ್ಕಟ್ಗಿರಿ, ಮುಜುಗರ ಯಾವ್ಯಾವುದಿರುತ್ತದೆ ಅವು ಹೊರಗೆ ಬೀಳುವುದು ಈ ರೀತಿ ಪ್ರಶ್ನೆಗಳನ್ನು ಹಾಕಿದಾಗ ಇದರಲ್ಲಿ ಮುಖ್ಯಮಂತ್ರಿಗಳದ್ದೇನಿಲ್ಲ, it is the mischief of official set up They do not want the truth to come out 15 ದಿವಸ ಅಂದ್ರೆ ಸದನವಿರುವುದಿಲ್ಲ Automatically the question gets lapsed ಸತ್ಯವನ್ನು ಕತ್ತುಹಿಚುಕಿ ಸಾಯಿಸುವುದು ಹೇಗೆ? ಈ ಅಧಿಕಾರಿಗಳ ಹತ್ತಿರ ಕಲಿತುಕೊಳ್ಳಬೇಕು ನಾನು ಕೇಳಿರುವುದಕ್ಕೆ ಉತ್ತರಿಸಲು ಏನು ಕಷ್ಟವಿದೆ, ತಾವೇ ಹೇಳಿ ಸಾರ್ ಮುಖ್ಯಮಂತ್ರಿಗಳೇ Sir I want you take serious action Who is the officer concerned? Why they have put forward this lame excuse? ತಮ್ಮ ಕಾರ್ಯಾಲಯ ಕಾರ್ಯೋನ್ಮುಖ ವಾಗಬೇಕಾಗಿದೆ ಸರ್ಕಾರದ ಮೇಲೆ ನನ್ನ ತಕರಾರಿಲ್ಲ ಅಧಿಕಾರಿಗಳಲ್ಲಿ ಸ್ಥಾಪಿತ ಹಿತಾಸಕ್ತಿಗಳು ಯಾವ ಕಾಲದಲ್ಲೂ ಇದ್ದಾರೆ ನಾನು ಅಲ್ಲಿ ಕೂತಿದ್ದಾಗಲೂ ಇಂತಹ ಘಟನೆಗಳು ಬಂದಾಗ ಕ್ರಮ ಜರುಗಿಸಿದ್ದೇನೆ ಅವರು ಸಿಕ್ಕಿಹಾಕಿಕೊಂಡು ಮುಜುಗರ ಆಗುವುದನ್ನು ತಪ್ಪಿಸಿಕೊಳ್ಳಲು ಹೀಗೆ ಮಾಡುತ್ತಾರೆ ಯಾವನೋ guards, forester ಸಿಕ್ಕಿದರೆ ಅವನನ್ನು ಅದುಮಿಕೊಳ್ಳಲು ಇವರು ಗಟ್ಟಿಗರು ಇವರು ಎಷ್ಟು ಜನರಿದ್ದಾರೆ ಗೊತ್ತೇ ಕರ್ನಾಟಕದಲ್ಲಿ? ಏನೇನು ಕೆಲಸಕ್ಕೆ ಹೋಗುತ್ತಿದ್ದಾರೆ? ಕರ್ನಾಟಕ ಇವರಿಗೆ ಹುಲ್ಲುಗಾವಲಾಗಿಬಿಟ್ಟಿದೆ ಮುಖ್ಯಮಂತ್ರಿಗಳಲ್ಲ, ಅಧ್ಯಕ್ಷರು ತಕ್ಷಣ ಫೈಲ್ ತರಿಸಿ ಯಾರಿಗೆ ಹೋಗಿತ್ತು, ಏನು confusion? Who is behind this? Please call the Chief Secretary, initiate action

ಅಧ್ಯಕ್ಷರು. ಅವರೆಲ್ಲ ಆಸನಗಳಲ್ಲೇ ಕೂತುಕೊಳ್ಳುವುದಿಲ್ಲ ಅವತ್ತು ಸಂಸದೀಯ ಸಚಿವರು ಅವರೆಲ್ಲರ ಪರವಾಗಿ ತಲೆಬಾಗಿಸಬೇಕಾಯಿತು

ಶ್ರೀ ಕೆ ಆರ್ ರಮೇಶ್‌ಕುಮಾರ್ ನಾನು ತಮ್ಮಲ್ಲಿ ಕೈಜೋಡಿಸಿ ವಿನಂತಿಸಿಕೊಳ್ಳುತ್ತೇನೆ ಮೂರನೇ ಕ್ಲಾಸ್ ಓದಿದ್ದ ಕಾಮರಾಜ್ ಗೆ ಇಡೀ ರಾಜ್ಯ ಹಿಡಿತಕ್ಕೆ ತಗೊಂಡು ನಡೆಸೋಕ್ಕೆ ಸಾಧ್ಯವಿತ್ತು ಇವತ್ತಿಗೂ ಕಾಮರಾಜ್

ಆಳ್ವಿಕೆಯನ್ನು ಜನ ನೆನಪು ಮಾಡಿ ಕೊಳ್ಳುತ್ತಾರೆ ರಾಜಕಾರಣಿಗಳು ಅಸಹಾಯಕರಲ್ಲ You can initiate action

ಅಧ್ಯಕ್ಷರು. ನಾನು ಅಸಹಾಯಕ ಅಂತ ಹೇಳುತ್ತಿಲ್ಲ, ಅಸಹಾಯಕರು ಅಂತ ಮಂತ್ರಿಮಂಡಲದಲ್ಲಿ ಹೇಳಿದ್ದನ್ನು ಹೇಳಿದೆ ಅಷ್ಟೇ ಯಾಕೆ ಸುಮ್ಮನೆ ಅದೆಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಇನ್ನು 2–3 ದಿವಸಗಳಲ್ಲೇ ಈ ವಿಷಯಕ್ಕೆ ಸಂಬಂಧಪಟ್ಟ ಸಂಪೂರ್ಣ ಮಾಹಿತಿ ತರಿಸಿಕೊಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಅಧ್ಯಕ್ಷರಿಗೆ ಪರಮಾಧಿಕಾರವಿದೆ ಈ ರಾಜ್ಯದಲ್ಲಿ ಯಾರಿಗೂ ಇಲ್ಲ ನಿಮ್ಮ ಶಕ್ತಿ ಏನು ಅಂತ ನಿಮಗೇ ಗೊತ್ತಿಲ್ಲ ಅದಕ್ಕೆ ನಿಮ್ಮನ್ನು ಇಷ್ಟೊಂದು ಶಕ್ತಿಯಿರುವ ಪೀಠದಲ್ಲಿ ಕೂರಿಸಿರುವುದು, ಇಲ್ಲದಿದ್ದರೆ ಕೆಳಗೆ ಕೂರಿಸಿಬಿಡಬಹುದಿತ್ತು ಅಧಿಕಾರಿಗಳನ್ನು ಕರೆದು ನೀವು ಛೀಮಾರಿ ಹಾಕಬಹುದು ಆ ಸ್ಥಾನದಿಂದ ಏನೆಲ್ಲ ನಡೆದಿದೆ?

ಅಧ್ಯಕ್ಷರು ಆಯಿತು, ನಾನು Chief Secretary ಯವರನ್ನು ಕರೆಸಿ ಈ ಪ್ರಶ್ನೆ ಒಂದೇ ಅಲ್ಲ, ಅನೇಕ ಪ್ರಶ್ನೆಗಳು ಯಾಕೆ ಹೀಗಾಗುತ್ತವೆ ಅಂತ ಮಾಡನಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಆ ಪ್ರಶ್ನೆಗೆ ಎರಡು ನಿಮಿಷದಲ್ಲಿ ಉತ್ತರ ಕೊಡಬಹುದು ಅಧಿಕಾರಿಗಳ ನಂಖ್ಯೆ ಎಷ್ಟು ಎನ್ನುವುದು computerನಲ್ಲಿರುತ್ತದೆ, ಅದಕ್ಕೆ 15 ದಿವಸ time ಬೇಕಾ? ನೀವು ಪ್ರಶ್ನೆಗಳನ್ನು ರಿವ್ಯೂ ಮಾಡಬೇಕು

ಹಿಂದುಳಿದಿರುವ ತಾಲ್ಲೂಕುಗಳಿಗೆ 110 ಕೆವಿ ಲೈನನ್ನು ಅಳವಡಿಸುವುದು

152(156) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಪರವಾಗಿ ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ ನಂಜುಂಡಪ್ಪನವರ ವರದಿಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿರುವ ಗುಲ್ಬರ್ಗಾ ವಿಭಾಗದ 26 ತಾಲ್ಲೂಕುಗಳಲ್ಲಿ ಗುಣಮಟ್ಟದ ವಿದ್ಯುತ್ ದೊರಕದೆ ರೈತರಿಗೆ ಹಾಗೂ ಗೃಹ ಬಳಕೆದಾರರಿಗೆ ತೊಂದರೆಯಾಗಿರುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು,